792 (1466) ಶ್ರೀ ಡಿ.ಆರ್. ಪಾಟೀಲ್ (ಗದಗ್): ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಜಿಲ್ಲಾವಾರು ವಿದ್ಯುತ್ ಚಾಲಿತ ನೀರಾವರಿ ಪಂಪುಸೆಟ್ಟುಗಳ ಸಂಖ್ಯೆ ಎಷ್ಟು (ಮಾಹಿತಿ ಒದಗಿಸುವುದು):

ಆ) ರಾಜ್ಯದ ಜಿಲ್ಲಾವಾರು ಗ್ರಾಮೀಣ ಪ್ರದೇಶದ ಜನತೆಗೆ ಕುಡಿಯುವ ನೀರಿನ ಸಲುವಾಗಿ ಉಪಯೋಗಿಸುವ ವಿದ್ಯುತ್ ಪಂಪುಸೆಟ್ಟುಗಳ ಸಂಖ್ಯೆ ಎಷ್ಟು (ಮಾಹಿತಿ ಒದಗಿಸುವುದು):

ಇ) ಗ್ರಾಮೀಣ ಪ್ರದೇಶದ ಪ್ರತಿಯೊಬ್ಬರ ಜೀವನಕ್ಕೆ ಅವಶ್ಯಕವಾಗಿರುವ ಕುಡಿಯುವ ನೀರಿನ ಸರಬರಾಜಿಗಾಗಿ ವಿನಿಯೋಗಿಸುವ ವಿದ್ಯುತ್ ಶಕ್ತಿಯ ದರ ಕೆಲವು ರೈತರು ಉಪಯೋಗಿಸುವ ವಿದ್ಯುತ್ ದರಕ್ಕಿಂತ ಬಹಳಷ್ಟು ಹೆಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ರೈತರಿಗೆ ಪೂರೈಸುವ ದರದಲ್ಲಿಯೇ ಗ್ರಾಮ ಪಂಚಾಯತಿಗಳಿಗೆ ಕುಡಿಯುವ ನೀರು ಪೂರೈಸಲು ಬೇಕಾಗುವ ವಿದ್ಯುತ್ ಶಕ್ತಿಯನ್ನು ಪೂರೈಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಉ) ಇದಕ್ಕಾಗಿ ಬೇಕಾಗಬಹುದಾದ ಹೆಚ್ಚಿನ ಸಹಾಯ ಧನ ಎಷ್ಟು?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ದಿನಾಂಕ 31–12–2004ರ ಅಂತ್ಯಕ್ಕೆ ಇರುವಂತೆ ರಾಜ್ಯದಲ್ಲಿರುವ ವಿದ್ಯುತ್ ಚಾಲಿತ ನೀರಾವರಿ ಪಂಪುಸೆಟ್ಟುಗಳ ಒಟ್ಟು ಸಂಖ್ಯೆ 14.23 ಲಕ್ಷ ಇವುಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಿದೆ.

ಆ) ದಿನಾಂಕ 31–12–2004ರ ಅಂತ್ಯಕ್ಕೆ ಇರುವಂತೆ ರಾಜ್ಯದಲ್ಲಿರುವ ಗ್ರಾಮೀಣ ಪ್ರದೇಶದ ಜನತೆಗೆ ಕುಡಿಯುವ ನೀರಿನ ಸಲುವಾಗಿ ಉಪಯೋಗಿಸುವ ವಿದ್ಯುತ್ ಪಂಪುಸೆಟ್ಟು ಸ್ಥಾವರಗಳ ಒಟ್ಟು ಸಂಖ್ಯೆ 54,120 ಇವುಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ–2ರಲ್ಲಿ ಒದಗಿಸಿದೆ.

ಇ) ಕುಡಿಯುವ ನೀರಿನ ಸ್ಥಾವರಕ್ಕೆ ವಿದ್ಯುತ್ ಜಕಾತಿ ಎಲ್.ಟಿ–6ರ ಪ್ರಕಾರ ಬಿಲ್ಲು ಮಾಡಲಾಗುತ್ತದೆ. ಪ್ರಸ್ತುತ ಇದು ನಿಗದಿತ ಶುಲ್ಕ ಹೆಚ್.ಪಿ. ಒಂದಕ್ಕೆ ರೂ 35/– ಹಾಗೂ ಬಳಕೆದಾರ ಯೂನಿಟ್ಟು ಒಂದಕ್ಕೆ 310 ಪೈಸೆ ಆಗಿರುತ್ತದೆ.

ಜಕಾತಿ ದರ ನಿಷ್ಕರ್ಷೆಯು, ಬಳಕೆದಾರರ ಹಣ ಪಾವತಿಸುವ ಸಾಮರ್ಥ್ಯ ಬಳಕೆಯಾಗುವ ವಿದ್ಯುತ್‌ನ ಪ್ರಮಾಣ, ಉದ್ದೇಶ, ಲಭ್ಯವಿರುವ ಕ್ರಾಸ್ ಸಬ್ಸಿಡಿ ಇತ್ಯಾದಿಗಳನ್ನು ಅವಲಂಬಿಸಿರುತ್ತದೆ. ಇವುಗಳನ್ನೆಲ್ಲವನ್ನು ಸಮಗ್ರವಾಗಿ ಪರಿಶೀಲಿಸಿ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ದರವನ್ನು ನಿಗದಿಪಡಿಸಿರುತ್ತದೆ. ಕರ್ನಾಟಕ ವಿದ್ಯುತ್ ದರಗಳನ್ನು ವಿದ್ಯುತ್ ಸರಬರಾಜು ಕಂಪನಿಗಳು ಕುಡಿಯುವ ನೀರು ಸ್ಥಾವರಗಳು ಮತ್ತು ನೀರಾವರಿ ಪಂಪುಸೆಟ್ಟುಗಳಿಗೆ ವಿಧಿಸುತ್ತಿವೆ.

ಈ) ವಿದ್ಯುತ್ ದರಗಳ ನಿಷ್ಕರ್ಷೆಗಳನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಅಮೂಲಾಗ್ರವಾಗಿ ಪರಿಶೀಲಿಸಿದ ನಂತರವೇ ಮಾಡುತ್ತಿದೆ. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ನಿಗದಿಪಡಿಸುವ ದರಗಳನ್ನು ಅನುಷ್ಠಾನಗೊಳಿಸುವ ಕೆಲಸವನ್ನು ಮಾತ್ರ ವಿದ್ಯುತ್ ಸರಬರಾಜು ಕಂಪನಿಗಳು ಮಾಡುತ್ತಿವೆ.

ಉ) ಇದಕ್ಕಾಗಿ ಬೇಕಾಗಬಹುದಾದ ಹೆಚ್ಚುವರಿ ಸಹಾಯ ಧನ ವಾರ್ಷಿಕ ಸುಮಾರು 148 ಕೋಟಿ ರೂ.ಗಳು.